

WWF 50 YEARS IN INDIA

# ಒಂದು ಭೂಮಿ ಒಂದು ಮನೆ

## ಹಂತ ೧ – ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ

ತರಗತಿಗಳು ೬, ೭ & ೮

ಚಟುವಟಿಕೆ ಪುಸ್ತಕ

**ನಮಸ್ತೇ, ಒಂದು ಭೂಮಿ – ಒಂದು ಮನೆ ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ!**

ನಿಮಗೆ ಗೊತ್ತೇ, ನೀವಲ್ಲದೇ ನಿಮ್ಮ ಮನೆಯಲ್ಲಿ ಇತರ ಜೀವಿಗಳೂ ಕೂಡಾ ಬದುಕುತ್ತಿವೆಯೆಂದು? ಅವುಗಳಲ್ಲಿ ಕೆಲವು ನಮ್ಮ ಕಣ್ಣೆದುರೇ ಓಡಾಡುತ್ತಿರಬಹುದು ಆದರೆ ಕೆಲವು ನಮ್ಮ ಗುಪ್ತ ಸದಸ್ಯರಾಗಿರುತ್ತವೆ!

ನಮ್ಮ ಗ್ರಹ – ಭೂಮಿಯನ್ನು ನಾವು ಹಲವಾರು ಸಸ್ಯಗಳು ಹಾಗೂ ಪ್ರಾಣಿಗಳೊಂದಿಗೆ ಹಂಚಿಕೊಂಡು ಬದುಕುತ್ತಿದ್ದೇವೆ. ಹಾಗಾಗಿ ಅವುಗಳು ಕಾಡುಗಳಲ್ಲಿ ಇರಲಿ ಅಥವಾ ನಮ್ಮ ಮನೆಯಲ್ಲೇ ಇರಲಿ, ನಮ್ಮ ಸಂಪನ್ಮೂಲಗಳನ್ನು ಜಾಗ್ರತೆಯಾಗಿ ಬಳಸುವ ಮೂಲಕ ನಾವು ಅವುಗಳನ್ನು ಗೌರವಿಸಬೇಕು.

ಶಾಶ್ವತವಾದ ಸಂತೋಷದಾಯಕ ಹಾಗೂ ಆರೋಗ್ಯಕರ ಗ್ರಹಕ್ಕಾಗಿ ಸಸ್ಯಗಳು, ಪ್ರಾಣಿಗಳು ಮತ್ತು ಮಾನವರು ಒಟ್ಟಾಗಿ ಅಭಿವೃದ್ಧಿ ಹೊಂದಬೇಕು.

ನಾವು ಪ್ರಕೃತಿಯ ಬಗ್ಗೆ ತಿಳಿದುಕೊಳ್ಳುವುದು, ಹಸಿರು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಮತ್ತು ಪರಿಸರ–ಸ್ನೇಹೀ ಮನೆಗಳನ್ನು ರಚಿಸುವಂಥಾ ಕೆಲವು ಕ್ರಮಗಳನ್ನು ಕೈಗೊಂಡರೆ ಮಾತ್ರ ಇವೆಲ್ಲಾ ಪ್ರಾರಂಭವಾಗುತ್ತದೆ.

ಹಾಗಾಗಿ, ಪ್ರಕೃತಿಯನ್ನು ಶೋಧಿಸುತ್ತಾ ನಿಮ್ಮ ಸಮಯವನ್ನು ಉತ್ತಮವಾಗಿ ಕಳೆಯಲು ಇಂದು ನಾವು ನಿಮಗಾಗಿ ಒಂದು ಭೂಮಿ – ಒಂದು ಮನೆ ಕಾರ್ಯಕ್ರಮವನ್ನು ಪರಿಚಯಿಸುತ್ತಿದ್ದೇವೆ. ಇದರಲ್ಲಿ ಮೂರು ಹಂತಗಳಿವೆ:



## ಹಂತ ೧ – ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ



## ಹಂತ ೨ – ನೋಡಿ ಮತ್ತು ಕಲಿಯಿರಿ



## ಹಂತ ೩ – ಚರ್ಚಿಸಿ ಮತ್ತು ಮಾಡಿ

# ಹೆತ್ತವರಿಗೆ/ಪೋಷಕರಿಗೆ ಸೂಚನೆ

**"ಒಂದು ಭೂಮಿ – ಒಂದು ಮನೆ", ಇದು, ವಾರಕ್ಕೆ ಕೇವಲ ೩೦ ನಿಮಿಷಗಳ ಸಮಯ ತೆಗೆದುಕೊಳ್ಳುವ ಚಟುವಟಿಕೆಗಳನ್ನೊಳಗೊಂಡ, ಹತ್ತು ವಾರಗಳ ಕಿರು ಕಾರ್ಯಕ್ರಮ.**

- ಕಾರ್ಯಹಾಳೆಗಳನ್ನು ಮುದ್ರಿಸಬಹುದು ಅಥವಾ ಒಂದು ಖಾಲಿ ಕಾಗದ/ಟಿಪ್ಪಣಿ ಪುಸ್ತಕದಲ್ಲಿ ಬರೆಯಬಹುದು.

- ಎಲ್ಲಾ ಚಟುವಟಿಕೆಗಳ ಸಮಯದಲ್ಲೂ ನಿಮ್ಮ ಮಕ್ಕಳೊಂದಿಗೆ ಇದ್ದು ಬೆಂಬಲಿಸಿ. ಕಾರ್ಯಹಾಳೆಗಳನ್ನು ಸಂಪೂರ್ಣಗೊಳಿಸಲು ಅವರಿಗೆ ಸಹಾಯ ಮಾಡಿ.

- ಪ್ರತಿಯೊಂದು ಚಟುವಟಿಕೆಯಲ್ಲಿಯೂ ಬೆಂಬಲವಾಗಿ, ಶಿಕ್ಷಕರಿಗೆ ವಾಟ್ಸ್‌ಆಪ್ ಮೂಲಕ ಕಳುಹಿಸಲಾಗುವ ಅಥವಾ ಪ್ರತಿಯೊಂದು ಕಾರ್ಯಹಾಳೆಯೊಂದಿಗೆ ನೀಡಲಾಗುವ ಸಂಪರ್ಕ ಕೊಂಡಿ (ಲಿಂಕ್)ಯ ಮೂಲಕ ಡೌನ್‌ಲೋಡ್ ಮಾಡಬಹುದಾದ ಒಂದು ವೀಡಿಯೋ / ದೃಶ್ಯಚಿತ್ರವಿರುತ್ತದೆ.

ಯಾವಾಗಲೂ ಅವರ ಚಿಕ್ಕ ಯಶಸ್ಸನ್ನೂ ಪ್ರೋತ್ಸಾಹಿಸಿ ಆನಂದಿಸಿ ಮತ್ತು ಉತ್ತಮ ಕೌಟುಂಬಿಕ ಸಮಯವನ್ನು ಒಂದಾಗಿ ಕಳೆಯಿರಿ.

# ಹಂತ ೧
## ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ

ರೆಡೀ, ವನ್ ಟೂ ತ್ರೀ, ಹೊರಡಿ!

ಈಗ 'ಒಂದು ಭೂಮಿ – ಒಂದು ಮನೆ' ಯ ಪ್ರಥಮ ಹಂತವನ್ನು ಕೈಗೊಳ್ಳುವ ಸಮಯ. ಇದರಲ್ಲಿ ೩ ಕಾರ್ಯಹಾಳೆಗಳು ಹಾಗೂ ೩ ವೀಡಿಯೋಗಳಿರುತ್ತವೆ.

## ಪರಿವಿಡಿ

- **ವೀಡಿಯೋ ವಿ೧ಎ: ಪರಿಸರ ಪರಿಸರ ಎಲ್ಲೆಡೆ ಪರಿಸರ!**
  ಈ ವೀಡಿಯೋವನ್ನು ನೋಡುವುದರೊಂದಿಗೆ ವಸ್ತುತಃ ನಡೆಯುತ್ತಾ ದೃಶ್ಯಾತ್ಮಕವಾಗಿ ಪರಿಸರವನ್ನು ಶೋಧಿಸಿ.
  (ಸಂಪರ್ಕ ಕೊಂಡಿಯನ್ನು ಇಲ್ಲಿ ನೀಡಬೇಕು).

- **ಕಾರ್ಯಹಾಳೆ ಡಬ್ಲ್ಯೂ೧ಎ: ನನ್ನ ಪ್ರಕೃತಿ / ಪರಿಸರ ಪುಸ್ತಕ**
  ಈ ದೃಶ್ಯಾತ್ಮಕ ವಸ್ತುತಃ ನಡಿಗೆಯಲ್ಲಿ ನೀವು ನೋಡಿರುವ ಎಲ್ಲಾ ಸಸ್ಯ ಮತ್ತು ಪ್ರಾಣಿಗಳ ಚಿತ್ರ ಬಿಡಿಸುವುದರೊಂದಿಗೆ ನಿಮ್ಮ ಪರಿಸರ ಪುಸ್ತಕವನ್ನು ರಚಿಸಿ.

- **ವೀಡಿಯೋ ವಿ೧ಬಿ: ಪ್ರಕೃತಿ ಪ್ರಿಯರು**
  ನಿಮ್ಮ ಮನೆಯಲ್ಲಿರುವ ಹಾಗೂ ಸುತ್ತಮುತ್ತಲಿನ ಸಸ್ಯ ಮತ್ತು ಪ್ರಾಣಿಗಳ ಬಗ್ಗೆ ಒಂದು ದೃಶ್ಯಕಥೆ
  (ಸಂಪರ್ಕ ಕೊಂಡಿಯನ್ನು ಇಲ್ಲಿ ನೀಡಲಾಗುತ್ತದೆ).

- **ಕಾರ್ಯಹಾಳೆ ಡಬ್ಲ್ಯೂ೧ಬಿ: ಪರಿಸರದ ಪತ್ತೇದಾರರಾಗಿ!**
  ನಿಮ್ಮ ಮನೆಯಲ್ಲಿ ಅಥವಾ ಸುತ್ತಮುತ್ತಲೂ, ಕಿಟಕಿ ಅಥವಾ ಮಹಡಿಯಿಂದ ನೀವು ನೋಡಬಹುದಾದ ಪ್ರಾಣಿಗಳನ್ನು ಕಂಡು ಹುಡುಕಿ. ನಿಮ್ಮ ಮನೆ ಅಥವಾ ಪಕ್ಕದಲ್ಲಿ ಒಂದು ಚಿಕ್ಕ ಗಿಡ ಅಥವಾ ಹೂವನ್ನು ಚಿತ್ರಿಸಿ.

- **ವೀಡಿಯೋ ವಿ೧ಸಿ: ಪ್ರಕೃತಿ ಮತ್ತು ದೇಶ**
  ನಿಮ್ಮ ರಾಜ್ಯ ಮತ್ತು ಭಾರತದಲ್ಲಿರುವ ಸಸ್ಯ &
  (ಸಂಪರ್ಕ ಕೊಂಡಿಯನ್ನು ಇಲ್ಲಿ ನೀಡಲಾಗುತ್ತದೆ).

- **ಪ್ರಾಣಿಗಳ ಕುರಿತು ತಿಳಿಯಲು ವಿಡೀಯೋವನ್ನು ನೋಡಿ**

- **ಕಾರ್ಯಹಾಳೆ ಡಬ್ಲ್ಯೂ೧ಸಿ: ನನ್ನ ರಾಜ್ಯಪ್ರಾಣಿ ಮತ್ತು ಸಸ್ಯ**
  ನಿಮ್ಮ ರಾಜ್ಯಪ್ರಾಣಿ ಮತ್ತು ಸಸ್ಯದ ಚಿತ್ರವನ್ನು ಬಿಡಿಸಿ.

- ಮರುಮನನ ಮತ್ತು ಇನ್ನಷ್ಟು
  ನೀವು ಕಲಿತಿರುವುದನ್ನು ಮರುಪರಿಶೀಲಿಸಿ ಮತ್ತು ವರದಿ ಮಾಡಿ.

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು) ಸಾಧಿಸಲು ಒಂದು ಭೂಮಿ, ಒಂದು ಮನೆ ಸಹಾಯ ಮಾಡುತ್ತದೆ.

ಹಂತ ೧ನ್ನು ಈ ಕೆಳಗಿನವುಗಳಿಗಾಗಿ ಮಾಡಲಾಗಿದೆ:

೩ ಉತ್ತಮ ಆರೋಗ್ಯ ಮತ್ತು ಸುರಕ್ಷೆ — 3 GOOD HEALTH AND WELL-BEING


4 QUALITY EDUCATION — ೪ ಗುಣಮಟ್ಟದ ಶಿಕ್ಷಣ

## ವೀಡಿಯೋ ವಿಗಎ

### ವೀಡಿಯೋದ ಸಮಯ
### ಪರಿಸರ ಪರಿಸರ ಎಲ್ಲೆಡೆ ಪರಿಸರ!

ನೈಸರ್ಗಿಕ ಪ್ರಕೃತಿಯ ಕಾಲುಹಾದಿ ಜಾಡಿನಲ್ಲಿ ಹೋಗಲು ಸಾಧ್ಯವಾಗುತ್ತಿಲ್ಲವೇ? ಒಂದು ಗುಂಡಿ ಒತ್ತಿದರೆ ನಿಮಗೆ ಪ್ರಕೃತಿಯ ಜಾಡು ಸಿಗುವಂತೆ ನಾವು ಮಾಡಿದ್ದೇವೆ. ನಿಮ್ಮ ಮನೆಯಲ್ಲಿಯೇ ಕುಳಿತು ಭಾರತದ ನೈಸರ್ಗಿಕ ಆವಾಸಸ್ಥಾನಗಳನ್ನು ಶೋಧಿಸಲು ಹಾಗೂ ಕೆಲವು ಅದ್ಭುತ ಜೀವವೈವಿಧ್ಯವನ್ನು ಅನ್ವೇಷಿಸಲು ಇದೊಂದು ಉತ್ತಮ ಮಾರ್ಗವಾಗಿದೆ. ವೀಡಿಯೋವನ್ನು ಹಾಗೂ ನಂತರ ಬರುವ ಚಟುವಟಿಕೆಗಳನ್ನು ಗಮನವಿಟ್ಟು ನೋಡಿ.



# ಕಾರ್ಯಹಾಳೆ

## ನನ್ನ ಪರಿಸರ ಪುಸ್ತಕ

ವಸ್ತುತಃ ಪ್ರಕೃತಿಯ ಜಾಡಿನಿಂದ ನೀವೇನನ್ನು ಕಲಿತಿದ್ದೀರಿ ಹಾಗೂ ವೀಡಿಯೋದುದ್ದಕ್ಕೂ ನೀವು ಎಷ್ಟು ಗಮನವಿಟ್ಟು ನೋಡಿದ್ದೀರಿ ಎಂದು ಈಗ ತಿಳಿಯೋಣ.

೧. ಸಸ್ಯ ಮತ್ತು ಪ್ರಾಣಿಗಳನ್ನು ವೀಕ್ಷಿಸುವಾಗ ಅಥವಾ ಜೀವವೈವಿಧ್ಯ ಪ್ರದೇಶವನ್ನು ಶೋಧಿಸುವಾಗ, ನಾವೆಲ್ಲರೂ ಪಾಲಿಸಲೇ ಬೇಕಾದ ಅಭ್ಯಾಸಗಳನ್ನು ಹೌದು ಅಥವಾ ಇಲ್ಲ ಎಂದು ಬರೆಯುವ ಮೂಲಕ ಗುರುತಿಸಿ. ಈ ಸರಳ ಹಾಗೂ ಸಾರ್ವತ್ರಿಕ ಕ್ರಮಗಳು ಪ್ರಕೃತಿ ಮತ್ತು ಇತರ ಜೀವಿಗಳ ಬಗ್ಗೆ ನಾವು ಜವಾಬ್ದಾರಿಯುತ ಅನುಭೂತಿ ಹೊಂದಿದ್ದೇವೆಂದು ಖಚಿತ ಪಡಿಸುತ್ತವೆ.

ಹೌದು/ಇಲ್ಲ

೧. ನೀವು ವೀಕ್ಷಿಸಿರುವುದನ್ನು ದಾಖಲಿಸಿಕೊಳ್ಳಲು ಒಂದು ಟಿಪ್ಪಣಿ ಪುಸ್ತಕ ಮತ್ತು ಒಂದು ಪೆನ್ಸಿಲ್ ☐

೨. ನಿಮಗೆ ಬೇಸರವೆನಿಸಿದಾಗ ಆಟವಾಡಲು ಒಂದು ಆಟಿಕೆ. ☐

೩. ಓದಲು ಒಂದು ಕಥೆ ಪುಸ್ತಕ. ☐

೪. ಸೊಳ್ಳೆ ಕಡಿತವನ್ನು ತಪ್ಪಿಸಲು ಸಂಪೂರ್ಣ ಮೈಮುಚ್ಚುವಂತಿರುವ ಬಟ್ಟೆಗಳು. ☐

೫. ಕೆಲವು ಆರೋಗ್ಯಕರ ತಿಂಡಿ-ತಿನಿಸುಗಳು. ☐

೬. ಒಂದು ನೀರಿನ ಜಾಡಿ. ☐

೭. ಬಣ್ಣಗಳು, ಆಕಾರ, ಗಾತ್ರ ಮತ್ತು ಚಲನವಲನವನ್ನು ಗಮನಿಸುವ ಆಸಕ್ತಿಯುತ ಕಣ್ಣುಗಳು. ☐

೮. ಎಲ್ಲಾ ರೀತಿಯ ಶಬ್ದಗಳನ್ನು ಕೇಳಲು ಚುರುಕಾದ ಕಿವಿಗಳು. ☐

೯. ವಿವಿಧ ವಾಸನೆಗಳ ವ್ಯತ್ಯಾಸವನ್ನು ಕಂಡುಕೊಳ್ಳಲು ಸೂಕ್ಷ್ಮವಾದ ಮೂಗು. ☐

೧೦. ಪ್ರಕೃತಿ ಮತ್ತು ಇತರ ಜೀವಿಗಳನ್ನು ಗೌರವಿಸಿ. ☐

೧೧. 'ಯಾವುದೇ ಕುರುಹನ್ನೂ ಬಿಡಬಾರದು' ಎಂಬ ನಿಯಮ. ☐

೧೨. ಚಿಕ್ಕಪುಟ್ಟ ಪ್ರಾಣಿಗಳು/ಕ್ರಿಮಿಕೀಟಗಳನ್ನು ಹಿಡಿಯಲು ಒಂದು ಪೆಟ್ಟಿಗೆ. ☐

೧೩. ಎಲೆ ಮತ್ತು ಕಡ್ಡಿಗಳನ್ನು ಸಂಗ್ರಹಿಸಲು ಒಂದು ಚೀಲ. ☐

೧೪. ಕಾಲುಹಾದಿ ಜಾಡಿನಲ್ಲಿ ಒಬ್ಬರೇ ಹೋಗಿ. ☐

೧೫. ಒಬ್ಬ ವಯಸ್ಕ ಅಥವಾ ಪರಿಣತರ ಜೊತೆಗೂಡಿ. ☐

೧೬. ಪ್ಲಾಸ್ಟಿಕ್ ಸಿಪ್ಪೆಗಳು/ಸೀಸೆಗಳನ್ನು ಎತ್ತಿಕೊಂಡು ಕಸದ ಬುಟ್ಟಿಯಲ್ಲಿ ಹಾಕಿ. ☐

೧೭. ಮತ್ತಷ್ಟು ಕಲಿಯಲು ಪ್ರಶ್ನೆಗಳ ಪಟ್ಟಿಯನ್ನು ಸಿದ್ಧಗೊಳಿಸಿ. ☐

೧೮. ನಿಮ್ಮ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳಿ. ☐

೧೯. ಗಾಢ ಬಣ್ಣದ ಬಟ್ಟೆಗಳನ್ನು ಧರಿಸಿ. ☐

೨೦. ಜಾಡುಹಿಡಿದು ಹೋಗುವಾಗ ಜೋರಾಗಿ ಗದ್ದಲ ಮಾಡಿ. ☐

ಸರಿಯಾದ ಉತ್ತರಗಳನ್ನು ತಿಳಿಯಲು ವೀಡಿಯೋವನ್ನು ಪುನಃ ನೋಡಿ.

೨. ಈಗ, ವೀಡಿಯೋದಲ್ಲಿ ನೀವು ನೋಡಿರುವ ಎಲ್ಲಾ ವಿಷಯಗಳ ಚಿತ್ರವನ್ನು ಬಿಡಿಸಿ!

ಚಿಕ್ಕ ಸಸ್ಯ

ಸರೀಸೃಪಗಳು

ಕೀಟಗಳು

ಸಸ್ತನಿಗಳು

ಪಕ್ಷಿಗಳು

ಮರಗಳು

೩. ಕಾಲುಹಾದಿ ಜಾಡಿನಲ್ಲಿ ಹೋಗುವಾಗ ನೀವು ಕಲಿತ ಒಂದು ಕುತೂಹಲಕರ ಅಂಶವನ್ನು ಬರೆಯಿರಿ.

# ವೀಡಿಯೋ ವಿಭಾಗ

## ವೀಡಿಯೋದ ಸಮಯ
## ಪ್ರಕೃತಿ ಪ್ರಿಯರು

ನಿಮ್ಮ ಮನೆಯಲ್ಲಿರುವ ಮತ್ತು ಹೊರಗಿರುವ ಸಸ್ಯ ಹಾಗೂ ಪ್ರಾಣಿಗಳ ಚಿತ್ರಕಥೆಯನ್ನು ನೋಡಿ.



# ಕಾರ್ಯಹಾಳೆ

## ಪರಿಸರದ ಪತ್ತೇದಾರರಾಗಿ!

ನಮ್ಮ ಮನೆಗೆ ಹಲವು ಪ್ರಾಣಿಗಳು ಭೇಟಿ ನೀಡುತ್ತವೆ. ಇರುವೆಗಳು, ಹಲ್ಲಿಗಳು, ಚಿಟ್ಟೆಗಳು ಅಥವಾ ಪಕ್ಷಿಗಳಂಥಾ ಕೆಲವನ್ನು ನೀವು ನೋಡಿರಬಹುದು. ಹಾಗೆಯೇ ನೀವು, ಪುಸ್ತಕದ ಹುಳ/ಬೆಳ್ಳಿಮೀನುಗಳನ್ನು ನೋಡಿರುವ ಅಥವಾ ಕೇಳಿ ತಿಳಿದಿರುವ ಸಾಧ್ಯತೆ ಇದೆ. ಅವುಗಳು ನಿಮ್ಮ ಮನೆಯ ಗುಪ್ತ ಸದಸ್ಯರು.

ದಿನದ ವಿವಿಧ ಸಮಯದಲ್ಲಿ ನಿಮ್ಮ ಮನೆಯ ಮಹಡಿ ಅಥವಾ ಕಿಟಿಕಿಯ ಪಕ್ಕ ನಿಂತುಕೊಳ್ಳಿ (ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ). ನಿಮ್ಮ ಟಿಪ್ಪಣಿ ಪುಸ್ತಕದಲ್ಲಿ ಈ ಕೆಳಗಿನ ವಿಷಯಗಳ ವೀಕ್ಷಣೆಯನ್ನು ಬರೆಯಿರಿ.

**ಸಾಮಾನ್ಯ ಮಾಹಿತಿ**

| ಕಾಲ | ಭೌಗೋಳಿಕತೆ (ಉದಾ: ಗುಡ್ಡಪ್ರದೇಶ, ಒಣಪ್ರದೇಶ, | ಮನೆಯಲ್ಲಿ ಅವುಗಳ ಸ್ಥಳ |
|---|---|---|
| | | |

### ಬೆಳಗ್ಗೆ

| | |
|---|---|
| ತಾಪಮಾನ:: | ತೇವಾಂಶ (ಆರ್ದ್ರತೆ): |
| ಗಾಳಿ: | ವಾಸನೆ: |
| ಆಕಾಶ: | |

ನೀವು ವೀಕ್ಷಿಸಿದ ಎಲ್ಲಾ ಜೀವಿಗಳ ಚಿತ್ರಬಿಡಿಸಿ ಅಥವಾ ಅವುಗಳ ಬಗ್ಗೆ ಬರೆಯಿರಿ.ಃಊಡಿಜ

| | |
|---|---|
| ಪಕ್ಷಿಗಳು | ಕೀಟಗಳು |
| ಸಸ್ಯಗಳು/ಬಳ್ಳಿಗಳು | ಮರಗಳು |

ಇತರ / ಇತರವುಗಳು

## ಮಧ್ಯಾಹ್ನ

| | |
|---|---|
| ತಾಪಮಾನ: | ತೇವಾಂಶ (ಆರ್ದ್ರತೆ): |
| ಗಾಳಿ: | ವಾಸನೆ: |
| ಆಕಾಶ: | |

ನೀವು ವೀಕ್ಷಿಸಿದ ಎಲ್ಲಾ ಜೀವಿಗಳ ಚಿತ್ರಬಿಡಿಸಿ ಅಥವಾ ಅವುಗಳ ಬಗ್ಗೆ ಬರೆಯಿರಿ.ಃಖಿಜ

ಪಕ್ಷಿಗಳು

ಕೀಟಗಳು

ಸಸ್ಯಗಳು/ಬಳ್ಳಿಗಳು

ಮರಗಳು

ಇತರ / ಇತರವುಗಳು

## ರಾತ್ರಿ

| | |
|---|---|
| ತಾಪಮಾನ: | ತೇವಾಂಶ (ಆರ್ದ್ರತೆ): |
| ಗಾಳಿ: | ವಾಸನೆ: |
| ಆಕಾಶ: | |

**ನೀವು ವೀಕ್ಷಿಸಿದ ಎಲ್ಲಾ ಜೀವಿಗಳ ಚಿತ್ರಬಿಡಿಸಿ ಅಥವಾ ಅವುಗಳ ಬಗ್ಗೆ ಬರೆಯಿರಿ.ಃಊಜ**

ಪಕ್ಷಿಗಳು

ಕೀಟಗಳು

ಸಸ್ಯಗಳು/ಬಳ್ಳಿಗಳು

ಮರಗಳು

ಇತರ / ಇತರವುಗಳು

## ಕಾರ್ಯಹಾಳೆ

# ಅತ್ಯಾಸಕ್ತ ವೀಕ್ಷಕ

ಪ್ರಕೃತಿ ಮಧ್ಯೆ ಸಮಯ ಕಳೆಯುವುದರಿಂದ ನಮ್ಮ ಇಂದ್ರಿಯಗಳು ಅಭಿವೃದ್ಧಿಗೊಳ್ಳುತ್ತವೆ, ಗಮನಿಸುವಿಕೆ ತೀಕ್ಷ್ಣವಾಗುತ್ತದೆ ಮತ್ತು ನಮ್ಮ ಕಲಿಕೆಯ ಶಕ್ತಿ ಹೆಚ್ಚಾಗುತ್ತದೆ. ಪ್ರಕೃತಿ ಎಲ್ಲೆಡೆ ಇದೆ, ನಮ್ಮ ಮನೆಯೊಳಗೆ ಕೂಡಾ, ಅಥವಾ ಮನೆಯ ಮಹಡಿ ಅಥವಾ ಕಿಟಕಿಗಳ ಮೂಲಕ ನೋಡಿ ಆನಂದಿಸಬಹುದು.

- ನಿಮ್ಮ ಮನೆಯ ಅಥವಾ ಸುತ್ತಮುತ್ತ ಯಾವುದಾದರೂ ಸಸ್ಯ/ಮರ/ಪಕ್ಷಿ/ಕೀಟವನ್ನು ಆಯ್ಕೆ ಮಾಡಿ, ಅದನ್ನು ಗಮನವಿಟ್ಟು ನೋಡಿ. ಈ ಕೆಳಗಿನ ವೀಕ್ಷಣೆಯ ಚಿತ್ರಬಿಡಿಸಿ ಅಥವಾ ಬರೆಯಿರಿ. ಅಗತ್ಯವಿದ್ದರೆ, ನಿಮ್ಮ ಕುಟುಂಬದ ಹಿರಿಯರೊಡನೆ ಚರ್ಚಿಸಿ (ನಿಮ್ಮ ಸಾಕುಪ್ರಾಣಿಯನ್ನು ಆಯ್ಕೆ ಮಾಡಬೇಡಿ).

ನಿಮ್ಮ ವೀಕ್ಷಣೆಯ ವಿಷಯದ ಚಿತ್ರ ಬಿಡಿಸಿ ಅದರ ಭಾಗಗಳನ್ನು ಹೆಸರಿಸಿ.

ಅದರ ದೇಹರಚನೆಯ ಲಕ್ಷಣಗಳನ್ನು ವಿವರಿಸಿ ಒಂದು ಪುಟ್ಟ ಟಿಪ್ಪಣಿ ಬರೆಯಿರಿ.

ಅದು ಸುತ್ತಲೂ ಚಲಿಸುತ್ತದೆಯೇ? ಹೌದೆಂದಾದರೆ, ಹೇಗೆ?

ಅದು ಏನನ್ನು ತಿನ್ನುತ್ತದೆ?

ಅದು ಭಾಗವಾಗಿರುವ, ಪರಿಸರವ್ಯವಸ್ಥೆ ಮತ್ತು ಅದರ ಮಹತ್ವವನ್ನು ವಿವರಿಸಿ.

ಆಹಾರ ಸರಪಳಿಯಲ್ಲಿ ಅದರ ಸ್ಥಾನವೇನು?

- [ ] ಉತ್ಪಾದಕ
- [ ] ಪ್ರಥಮ ಬಳಕೆದಾರ
- [ ] ದ್ವಿತೀಯ ಬಳಕೆದಾರ
- [ ] ತೃತೀಯ ಬಳಕೆದಾರ
- [ ] ಕೊಳೆತ ಮಾಂಸಭಕ್ಷಕ / ಕೊಳೆಯಿಸಿ ತಿನ್ನುವ ಜೀವಿ


ಅದು ಎಲ್ಲಿ ಜೀವಿಸುತ್ತದೆ ಎಂದು ಬರೆಯಿರಿ ಅಥವಾ ಚಿತ್ರಬಿಡಿಸಿ.

# ವೀಡಿಯೋ ವಿಗಸಿ

## ವೀಡಿಯೋದ ಸಮಯ
## ಪ್ರಕೃತಿ ಮತ್ತು ದೇಶ

ಭಾರತದಲ್ಲಿ ಹಲವಾರು ಸಸ್ಯ ಹಾಗೂ ಪ್ರಾಣಿಗಳಿವೆ. ಅವುಗಳ ಬಗ್ಗೆ ಇನ್ನಷ್ಟು ಅರಿಯಲು ಈ ವೀಡಿಯೋವನ್ನು ನೋಡಿ.



ಕಾರ್ಯಹಾಳೆ

# ನನ್ನ ರಾಜ್ಯ ಮತ್ತು ಅದರ ಜೀವವೈವಿಧ್ಯ

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ:

೧. ನನ್ನ ರಾಜ್ಯದ ಹೆಸರು:

೨. ರಾಜ್ಯಪ್ರಾಣಿಯ ಹೆಸರು:

೩. ರಾಜ್ಯಪಕ್ಷಿಯ ಹೆಸರು:

೪. ರಾಜ್ಯವೃಕ್ಷದ ಹೆಸರು:

೫. ರಾಜ್ಯಪುಷ್ಪದ ಹೆಸರು:

೬. ನನ್ನ ರಾಜ್ಯದ ಒಂದು ರಾಷ್ಟ್ರೀಯ ಉದ್ಯಾನವನ ಮತ್ತು ಒಂದು ವನ್ಯಜೀವಿಧಾಮದ ಹೆಸರು:

ನಿಮ್ಮ ರಾಜ್ಯದ ಹವಾಮಾನವನ್ನು ವಿವರಿಸಿ:

ನಿಮ್ಮ ರಾಜ್ಯದಲ್ಲಿ ಕಂಡುಬರುವ, ಪ್ರಮುಖ ರೀತಿಯ ಮಣ್ಣು ಮತ್ತು ಭೂಸ್ವರೂಪಗಳು ಯಾವುವು?

ನಿಮ್ಮ ರಾಜ್ಯದ ಯಾವುದಾದರೂ ಒಂದು ಸ್ಥಳೀಯ ಸಸ್ಯ ಮತ್ತು ಪ್ರಾಣಿಯನ್ನು ಹೆಸರಿಸಿ.

ಸ್ಥಳೀಯ ಸಸ್ಯ:

ಸ್ಥಳೀಯ ಪ್ರಾಣಿ:

## ಮರುಮನನದ ಸಮಯ!

ಅಭಿನಂದನೆಗಳು! ನೀವು ೧ನೆಯ ಹಂತವನ್ನು ಪೂರ್ಣಗೊಳಿಸಿದ್ದೀರಿ.

ನಾವು ಇಲ್ಲಿಯವರೆಗೆ ಏನನ್ನು ಕಲಿತಿದ್ದೇವೆ ನೋಡೋಣ! ಈ ಭಾಗದಲ್ಲಿ ನೀವು ಕಲಿತಿರುವ ಹಾಗೂ ನಿಮಗೆ ಈಗಾಗಲೇ ಗೊತ್ತಿದ್ದ ವಿಷಯಗಳ ಕುರಿತು ಕೆಳಗಿನ ಚೌಕಟ್ಟುಗಳಲ್ಲಿ ಬರೆಯಿರಿ.

೧. ೧. ನನಗೆ ಈಗಾಗಲೇ ಗೊತ್ತಿದ್ದ ವಿಷಯಗಳು

೨. ೨. ನಾನು ಹೊಸದಾಗಿ ಕಲಿತ ವಿಷಯಗಳು